# ತೈತ್ತಿರೀಯ ಉಪನಿಷತ್ತು

## (ಬ್ರಹ್ಮಾನಂದ ವಲ್ಲೀ)

ಸ್ವಾಮಿ ವೀರೇಶಾನಂದ

ಶ್ರೀ ಶಂಕರಾಚಾರ್ಯರು ಈ ಉಪನಿಷತ್ತಿನ ವ್ಯಾಖ್ಯಾನವನ್ನು ಒಂದು ಸುಂದರವಾದ ಶ್ಲೋಕದಿಂದ ಆರಂಭಿಸುತ್ತಾರೆ. ಕೇವಲ ಮಂಗಳಶ್ಲೋಕವಾಗಿ ಮಾತ್ರ ಇರದೆ, ಇದು ಇಡೀ ತೈತ್ತಿರೀಯ ಉಪನಿಷತ್ತಿನ ಸಾರಸಂಗ್ರಹವೇ ಆಗಿದೆ ಎನ್ನಬಹುದು. ಆ ಶ್ಲೋಕ ಹೀಗಿದೆ:

**ಯಸ್ಮಾತ್ ಜಾತಂ ಜಗತ್ಸರ್ವಂ ಯಸ್ಮಿನ್ನೇವ ಪ್ರಲೀಯತೇ ।**
**ಯೇನೇದಂ ಧಾರ್ಯತೇ ಚೈವ ತಸ್ಮೈ ಜ್ಞಾನಾತ್ಮನೇ ನಮಃ ॥**

'ಜಗತ್ತೆಲ್ಲವೂ ಯಾವನಿಂದ ಹುಟ್ಟಿದೆಯೋ, ಯಾರಲ್ಲಿ ಪ್ರಲಯವಾಗುತ್ತದೆಯೋ, ಮತ್ತು ಯಾರಿಂದ ಯಾವಾಗಲೂ ಧರಿಸಲ್ಪಟ್ಟಿದೆಯೋ, ಅಂಥ ಜ್ಞಾನಸ್ವರೂಪನಾದ ಪರಮಾತ್ಮನಿಗೆ ನಮಸ್ಕಾರ.'

### ಉಪನಿಷತ್ತಿನ ಸಂರಚನೆ

ಈ ಉಪನಿಷತ್ತು ಕೃಷ್ಣ ಯಜುರ್ವೇದಕ್ಕೆ ಸೇರಿದೆ. ಈ ವೇದದ ತೈತ್ತಿರೀಯ ಆರಣ್ಯಕದ ಏಳನೆಯ ಪ್ರಪಾಠಕದಿಂದ ಹಿಡಿದು ಒಂಭತ್ತನೆಯ ಪ್ರಪಾಠಕದವರೆಗಿನ ಭಾಗವೇ ತೈತ್ತಿರೀಯ ಉಪನಿಷತ್ತು ಎಂದು ಪ್ರಖ್ಯಾತವಾಗಿದೆ. ಎಲ್ಲ ವೇದಗಳಿಗೂ ಭಾಷ್ಯವನ್ನು ಬರೆದ ಸಾಯಣಾಚಾರ್ಯರ ಪ್ರಕಾರ, ತೈತ್ತಿರೀಯ ಉಪನಿಷತ್ತಿನಲ್ಲಿ ಮೂರು ಭಾಗಗಳಿವೆ : 'ಸಾಂಹಿತೀ', 'ವಾರುಣೀ' ಮತ್ತು 'ಯಾಜ್ಞಿಕೀ' ಎಂದು. ತೈತ್ತಿರೀಯ ಆರಣ್ಯಕದ ಏಳನೆಯ ಪ್ರಪಾಠಕವೇ ಸಾಂಹಿತೀ ಉಪನಿಷತ್ತು. ಇದು **ಶೀಕ್ಷಾವಲ್ಲಿ** ಎಂದು ಪ್ರಸಿದ್ಧವಾಗಿದೆ. ಎಂಟು, ಒಂಭತ್ತು – ಈ ಪ್ರಪಾಠಕಗಳಿಗೆ ವರುಣನೆಂಬ ಋಷಿಯು ಸಂಪ್ರದಾಯ ಕರ್ತೃ. ಆದ್ದರಿಂದ ಇವುಗಳಿಗೆ 'ವಾರುಣೀ ಉಪನಿಷತ್ತು' ಎಂದು ಹೆಸರು. ಇವೇ ಪ್ರಸಿದ್ಧವಾದ 'ಬ್ರಹ್ಮಾನಂದ ವಲ್ಲಿ' ಮತ್ತು 'ಭೃಗು ವಲ್ಲಿ'ಗಳು. ಹತ್ತನೆಯ ಪ್ರಪಾಠಕವು ಯಜ್ಞಗಳ ಆಚರಣೆಯಲ್ಲಿ ಉಪಯೋಗಕ್ಕೆ ಬರುತ್ತದೆ. ಆದ್ದರಿಂದ ಇದಕ್ಕೆ 'ಯಾಜ್ಞಿಕೀ ಉಪನಿಷತ್' ಎಂದು ಹೆಸರು. ಇವುಗಳಲ್ಲಿ ಹತ್ತನೆಯ ಪ್ರಪಾಠಕ್ಕೆ ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯವನ್ನು ರಚಿಸಿಲ್ಲ. ಹೀಗಾಗಿ ವರ್ತಮಾನ ಕಾಲದಲ್ಲಿ ಪ್ರಸಿದ್ಧವಾಗಿರುವ ತೈತ್ತಿರೀಯ ಉಪನಿಷತ್ತಿನಲ್ಲಿ ಈ ಭಾಗವು ಕಂಡುಬರುವುದಿಲ್ಲ.

### ಸತ್ಯ – ಜ್ಞಾನ – ಅನಂತ ಬ್ರಹ್ಮ

ಬ್ರಹ್ಮವಿದ್ಯೆಯನ್ನು ಗುರುಗಳು ಶಿಷ್ಯರಿಗೆ ಹೇಳಿಕೊಡುತ್ತಿದ್ದಾರೆ. ಇದಕ್ಕೆ ಮೊದಲು ವಿದ್ಯಾಭ್ಯಾಸವು ಸರಾಗವಾಗಿ ನಡೆಯಲೆಂದು ಭಗವಂತನಲ್ಲಿ ಹೀಗೆ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ: ''ಭಗವಂತನು ನಮ್ಮಿಬ್ಬರನ್ನೂ (ಗುರು ಮತ್ತು ಶಿಷ್ಯ) ಜೊತೆಜೊತೆಯಲ್ಲಿಯೇ ಕಾಪಾಡಲಿ. ನಾವಿಬ್ಬರೂ ಶಕ್ತಿವಂತರಾಗುವಂತೆ ಆಗಲಿ. ನಾವಿಬ್ಬರೂ ತೇಜಸ್ವಿಗಳಾಗಿದ್ದುಕೊಂಡು, ಆ ಮೂಲಕ ನಮ್ಮ ಅಧ್ಯಯನವು ಸಫಲವಾಗಲಿ. ನಾವು ಪರಸ್ಪರ ಎಂದೂ ದ್ವೇಷವನ್ನು ಸಾಧಿಸದೆ ಇರುವಂತೆ ಆಗಲಿ.''



ಈ ಪ್ರಾರ್ಥನೆಯ ನಂತರ ಗುರುಗಳು ತಮ್ಮ ಉಪದೇಶವನ್ನು ಆರಂಭಿದರು: ''ಬ್ರಹ್ಮಜ್ಞನು ಅತ್ಯಂತ ಶ್ರೇಷ್ಠವಾದುದನ್ನೇ ಪಡೆದುಕೊಳ್ಳುತ್ತಾನೆ. ಏಕೆಂದರೆ, ಇಡೀ ಸೃಷ್ಟಿಯ ಮೂಲಕಾರಣವೇ ಬ್ರಹ್ಮ ತತ್ತ್ವ. ಹೀಗಾಗಿ ಇದೇ ಅತ್ಯಂತ ಶ್ರೇಷ್ಠವಾದ ತತ್ತ್ವ. ಹಾಗೆಯೇ ಬ್ರಹ್ಮವೆಂದರೆ ಯಾವುದೋ ಒಂದು ನಿರ್ದಿಷ್ಟವಾದ ವಸ್ತುವಲ್ಲ. ಈ ಎಲ್ಲವೂ ಆಗಿರುವುದು, ಎಲ್ಲದರಲ್ಲೂ ಇರುವುದು — ಇದನ್ನೇ ಬ್ರಹ್ಮವೆಂದು ಕರೆಯುವುದು. ಎಲ್ಲವೂ ಆಗುವ ಸ್ಥಿತಿಯೇ ಅತ್ಯಂತ ಉನ್ನತವಾದ ಸ್ಥಿತಿ, ತಾನೆ? ಇದಕ್ಕಾಗಿಯೇ ಸೂತ್ರರೂಪವಾದ ಈ ಮಂತ್ರದಲ್ಲಿ ಹೀಗೆ ಹೇಳಿದೆ : **ಸತ್ಯಂ, ಜ್ಞಾನಮ್, ಅನಂತಂ ಬ್ರಹ್ಮ** ಎಂದು. ಮಗೂ, ಇದು ಬ್ರಹ್ಮನ ಲಕ್ಷಣವನ್ನು ಸ್ಪಷ್ಟವಾಗಿ, ಕರಾರುವಾಕ್ಕಾಗಿ ತಿಳಿಸುವ ಸೂತ್ರವಾಗಿದೆ. ಇಡೀ ವೇದದ, ವೇದಾಂತದ ಸಾರವೇ ಇದಾಗಿದೆ ಎಂದು ಹೇಳಬಹುದು.

''ಸತ್ಯ, ಜ್ಞಾನ, ಅನಂತ — ಈ ಮೂರೂ ಶಬ್ದಗಳು ಒಂದೊಂದನ್ನು ಅವಲಂಬಿಸಿಲ್ಲ. ಅವು ಪರಸ್ಪರ ಸ್ವತಂತ್ರ ಲಕ್ಷಣಗಳು. ಇದರ ಅರ್ಥ ಏನು ಗೊತ್ತೆ? ಸತ್ಯವಾದುದು ಯಾವುದೋ

ಅದೇ ಬ್ರಹ್ಮ, ಜ್ಞಾನವಾದುದು ಯಾವುದೋ ಅದೇ ಬ್ರಹ್ಮ, ಅನಂತವಾದುದು ಯಾವುದೋ ಅದೇ ಬ್ರಹ್ಮ.

''ಇನ್ನು ಸತ್ಯ ಎಂದರೆ ಏನು ಎಂದು ನೋಡೋಣ. ಯಾವುದು ತನ್ನ ಸ್ವರೂಪದಲ್ಲಿ ಇದೆಯೋ ಅದು ಸ್ವಲ್ಪವೂ ಮಾರ್ಪಡುವುದಿಲ್ಲವಾದರೆ, ಅಂಥ ವಸ್ತು 'ಸತ್ಯ' ಎಂದು ಪರಿಗಣಿಸಲ್ಪಡುತ್ತದೆ. ಹೀಗಾಗಿ ವಿಕಾರ ಅಥವಾ ಮಾರ್ಪಾಡು ಹೊಂದುವ ವಸ್ತು 'ಸುಳ್ಳು' ಎಂದೇ ಹೇಳಬೇಕು, ಅಲ್ಲವೆ? ಈ ನಿಟ್ಟಿನಲ್ಲಿ ನೋಡುವುದಾದರೆ, ಬ್ರಹ್ಮತತ್ತ್ವವೇ ಸತ್ಯವಾದುದು; ಉಳಿದುದೆಲ್ಲವೂ ವಿಕಾರಹೊಂದುತ್ತದೆ. ಹೀಗಾಗಿ ಬ್ರಹ್ಮವೊಂದೇ ಸತ್ಯವಾದುದು.

''ಇನ್ನು **ಜ್ಞಾನ** ಎಂದರೆ ಏನು ಎಂದು ನೋಡೋಣ. ಜ್ಞಾನವೆಂದರೆ ಬೋಧೆ, ಬ್ರಹ್ಮವೆಂದರೆ ಪರಿಶುದ್ಧ ಬೋಧೆ. ಜಗತ್ತಿನಲ್ಲಿ ಕಂಡುಬರುವ ಎಲ್ಲ ಬಗೆಯ ಜ್ಞಾನವೂ ಸೀಮಿತವಾದುದು; ಆಯಾ ವಸ್ತುವಿಗೆ ಸಂಬಂಧಪಟ್ಟದ್ದು. ಆದರೆ ಈ ಜ್ಞಾನವು ನಿರಪೇಕ್ಷವಾದ, ಯಾವ ವಸ್ತುವಿಗೂ ಸಂಬಂಧಪಟ್ಟಿಲ್ಲದ ಜ್ಞಾನ. ಹಾಗೆಯೇ ಈ ಜ್ಞಾನವು ಯಾವ ಕರ್ತೃವಿಗೂ ಸಂಬಂಧಪಟ್ಟದ್ದಲ್ಲ. ಜ್ಞಾತೃ-ಜ್ಞೇಯ - ಈ ಎರಡೂ ಪ್ರಾಪಂಚಿಕ ಜ್ಞಾನದಲ್ಲಿ ಖಂಡಿತ ಒಳಪಟ್ಟಿರುತ್ತದೆ. ಆದರೆ ಬ್ರಹ್ಮತತ್ತ್ವವಾದ ಜ್ಞಾನವು ಸ್ವತಂತ್ರವಾದುದು; ನಿರಪೇಕ್ಷವಾದುದು.

''ಬ್ರಹ್ಮತತ್ತ್ವದ ಇನ್ನೊಂದು ಲಕ್ಷಣವೆಂದರೆ, **'ಅನಂತ'** ಎಂಬುದು. ಅಂತವಿರುವುದು ಸತ್ಯವಾಗಲಾರದು. ಏಕೆಂದರೆ, ಅಂತ್ಯ ಅಥವಾ ವಿನಾಶವುಳ್ಳ ವಸ್ತುವು ಆತ್ಯಂತಿಕ ಸತ್ಯವಾಗಲಾರದು. ಬ್ರಹ್ಮವು ಸತ್ಯ ವಸ್ತುವಾಗಿರುವುದರಿಂದ ಅದಕ್ಕೆ ಅಂತ್ಯ ಅಥವಾ ವಿನಾಶ ಇರುವುದು ಸಾಧ್ಯವೇ ಇಲ್ಲ.''

ಆತ್ಮವೇ ಬ್ರಹ್ಮವಾಗಿದೆ ಎಂಬುದು ಉಪನಿಷತ್ತುಗಳ ಸಂದೇಶ. ಈ ಬ್ರಹ್ಮವಸ್ತುವು ಬುದ್ಧಿಗುಹೆಯಲ್ಲಿರುವ ಶ್ರೇಷ್ಠವಾದ ಆಕಾಶದಲ್ಲಿ ನಿಹಿತವಾಗಿದೆ ಎಂದು ಉಪನಿಷತ್ತು ಹೇಳುತ್ತದೆ. ಬುದ್ಧಿಯು ಭೋಗ ಮತ್ತು ಮೋಕ್ಷ — ಈ ಎರಡೂ ಅನುಭವಕ್ಕೆ ಬರುವ ಅರಿವಿನ ಸ್ಥಾನ. ಈ ಬುದ್ಧಿಯಲ್ಲಿರುವ ಅವ್ಯಾಕೃತವೆಂಬ ಆಕಾಶದಲ್ಲಿ ಬ್ರಹ್ಮವಸ್ತುವನ್ನು ಧ್ಯಾನದ ಮೂಲಕ ಅನುಭವಿಸಿ ತಿಳಿದುಕೊಳ್ಳಬಹುದು ಎಂದು ಇದರ ಅರ್ಥ. ಬ್ರಹ್ಮ ಅಥವಾ ಆತ್ಮವು ಎಲ್ಲ ಕಡೆ ಇರುವಂಥದ್ದು. ಅದನ್ನು ಕೇವಲ ಹೃದಯ ಗುಹೆಯಲ್ಲಿ ಸೀಮಿತಗೊಳಿಸಲಾಗುವುದಿಲ್ಲ. ಹೀಗಾಗಿ, ಹೃದಯ ಗುಹೆಯಲ್ಲಿ ಇಡಲ್ಪಟ್ಟಿದೆ ಎಂದರೆ, ಹೃದಯ ಗುಹೆಯಲ್ಲಿ ಧ್ಯಾನ ಮಾಡಿ ಪರಿಭಾವಿಸಬಹುದಾಗಿದೆ ಎಂದರ್ಥ. ಹೇಗೆ ಸೂರ್ಯನ ಪ್ರತಿಬಿಂಬವು ನೀರಿನಲ್ಲಿ ಕಂಡುಬರುತ್ತದೆಯೋ, ಹಾಗೆಯೇ ಬುದ್ಧಿ ಆಕಾಶದಲ್ಲಿ ಬ್ರಹ್ಮ ಅಥವಾ ಆತ್ಮವನ್ನು ಭಾವಿಸಬಹುದು. ಈ ಮೂಲಕ ಧ್ಯಾನದ ವಿಧಾನವನ್ನು ಉಪನಿಷತ್ತು ಬೋಧಿಸುತ್ತಿದೆ.

ಬ್ರಹ್ಮವನ್ನು ತನ್ನದೇ ಆತ್ಮವೆಂದು ಯಾವನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ, ಬಯಸಬಹುದಾದ ಎಲ್ಲ ಕಾಮಗಳನ್ನೂ ಬ್ರಹ್ಮದ ಜೊತೆಗೆ ಒಮ್ಮೆಗೇ ಒಂದೇ ಕ್ಷಣದಲ್ಲಿ ಅನುಭವಿಸುತ್ತಾನೆ. ಅಂದರೆ ಜಗತ್ತಿನ ಎಲ್ಲ ಭೋಗಗಳೂ ಬ್ರಹ್ಮಾನುಭವದಲ್ಲಿಯೇ ಮಿಲಿತವಾಗಿರುತ್ತದೆ ಎಂದು ಇದರ ಅರ್ಥ. ಬ್ರಹ್ಮನ ಜೊತೆಗೆ ಎಂದರೆ, ಬ್ರಹ್ಮವಾಗಿ ಎಂದರ್ಥ. ಬ್ರಹ್ಮವಿದನಾದವನು ಬ್ರಹ್ಮನೇ ಆಗಿಬಿಡುತ್ತಾನೆ. ಬ್ರಹ್ಮವೆಂದರೆ ಎಲ್ಲವೂ, ಸರ್ವವೂ ಆಗಿರುವುದು. ಹೀಗಾಗಿ ಬ್ರಹ್ಮನಾಗುವುದೂ ಒಂದೇ, ಈ ಜಗತ್ತಿನ ಎಲ್ಲ ಭೋಗಗಳನ್ನೂ ಒಮ್ಮೆಗೇ ಅನುಭವಿಸುವುದೂ ಒಂದೇ. ಸರ್ವಜ್ಞನಾದ ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡ ಅವನು ಎಲ್ಲರಿಗಿಂತ ಬುದ್ಧಿವಂತನಾಗಿರುತ್ತಾನೆ; ಶ್ರೇಷ್ಠಮಟ್ಟದ ಮೇಧಾವಿಯಾಗಿರುತ್ತಾನೆ.

## ಸರ್ವಂ ಬ್ರಹ್ಮಮಯಂ ಜಗತ್

ಬ್ರಹ್ಮವೇ ಆತ್ಮ. ಆತ್ಮನಿಂದಲೇ ಆಕಾಶವು ಹುಟ್ಟಿಬಂದಿತು. ಆಕಾಶದಿಂದ ವಾಯು; ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲ, ಜಲದಿಂದ ಪೃಥಿವೀ. ಪೃಥಿವಿಯಿಂದ ಎಲ್ಲ ಸಸ್ಯರಾಶಿ. ಈ ಸಸ್ಯರಾಶಿಯಿಂದಲೇ ಮನುಷ್ಯನಿಗೆ ಬೇಕಾದ ಅನ್ನ ಅಥವಾ ಆಹಾರ ಉತ್ಪನ್ನವಾಗುತ್ತದೆ. ಈ ಆಹಾರದಿಂದಲೇ ಮನುಷ್ಯನ ರೇತಸ್ಸು ಉಂಟಾಗುತ್ತದೆ. ಆ ರೇತಸ್ಸಿನಿಂದಲೇ ಒಬ್ಬ ಮನುಷ್ಯ ಜಂತುವು ಹುಟ್ಟುತ್ತಾನೆ. ಈ ಸೃಷ್ಟಿಕ್ರಮವನ್ನು ಬೋಧಿಸುವಲ್ಲಿ ಉಪನಿಷತ್ತಿನ ಉದ್ದೇಶ ಇದು: ಆಕಾಶದಿಂದ ಹಿಡಿದು ಮುಂದು ಮುಂದು ಸೃಷ್ಟಿಯಾಗುವ ಎಲ್ಲ ಜೀವಜಂತುಗಳೂ ಬ್ರಹ್ಮ ಅಥವಾ ಆತ್ಮನ ತತ್ತ್ವವೇ ಆಗಿದೆ. ಅವೆಲ್ಲದರಲ್ಲಿಯೂ ಬ್ರಹ್ಮತತ್ತ್ವವೇ ಅನುಸ್ಯೂತವಾಗಿ ಹರಿದುಬಂದಿದೆ. ಹೀಗಾಗಿ ಎಲ್ಲವೂ ಬ್ರಹ್ಮಮಯವೇ ಆಗಿದೆ; ಆತ್ಮಮಯವೇ ಆಗಿದೆ.

ಸೃಷ್ಟಿಯ ಅತ್ಯಂತ ಉನ್ನತ ಹಂತವೇ ಪುರುಷ ಅಥವಾ ಮನುಷ್ಯಜೀವಿ. ಮನುಷ್ಯ ಎಂದರೆ ಏನು? ಅವನ ಹೊರರೂಪ ಅನ್ನಮಯ ಅಥವಾ ಸ್ಥೂಲಶರೀರ. ಈ ಶರೀರವು ಅನ್ನಮಯ ಅಥವಾ ಆಹಾರಮಯವಾಗಿದೆ. ಈ ಶರೀರವೇ ತಾನು ಎಂದುಕೊಂಡರೆ, ಅದೇ ಅನ್ನಮಯಾತ್ಮ ಎನ್ನಿಸಿಕೊಳ್ಳುತ್ತದೆ. ಈ ಅನ್ನ ಅಥವಾ ಆಹಾರದಿಂದಲೇ ಎಲ್ಲ ಪ್ರಜೆಗಳ ದೇಹಗಳೂ ಹುಟ್ಟುವುದು. ಯಾವ ಯಾವ ಜೀವಿಗಳು ಈ ಭೂಮಿಯನ್ನು ಆಶ್ರಯಿಸಿವೆಯೋ, ಅವು ಈ ಅನ್ನದಿಂದಲೇ ಜೀವಿಸಿರುತ್ತವೆ. ಮತ್ತು ಕಡೆಯಲ್ಲಿ ಈ ಅನ್ನದಲ್ಲಿಯೇ ಒಳಹೊಗುತ್ತವೆ. ಹೀಗಾಗಿ ಅನ್ನವೇ ಎಲ್ಲ ಭೂತಗಳಲ್ಲಿಯೂ ಅತ್ಯಂತ ಶ್ರೇಷ್ಠವಾದುದು. ಹೀಗಾಗಿ ಅನ್ನವನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು.

ಈ ಅನ್ನರಸಮಯವಾದ ಆತ್ಮನಿಗಿಂತಲೂ ಒಳಗಿನ ಆತ್ಮನಿದ್ದಾನೆ. ಅವನೇ ಪ್ರಾಣಮಯ ಆತ್ಮ. ಈ ಪ್ರಾಣಮಯ ಆತ್ಮದಿಂದಲೇ ಅನ್ನಮಯ ಆತ್ಮವು ಸಂಪೂರ್ಣವಾಗಿ ಮಾಡಲ್ಪಟ್ಟಿದೆ. ಅಂದರೆ ಅನ್ನಮಯವೆಂಬುದು ಪ್ರಾಣದಿಂದಲೇ ತುಂಬಿಕೊಂಡಿದೆ. ಎಲ್ಲ ಇಂದ್ರಿಯಗಳೂ ಈ ಪ್ರಾಣವನ್ನೇ ಅನುಸರಿಸುತ್ತವೆ. ಮನುಷ್ಯರೂ, ಪಶುಗಳು - ಈ ಎಲ್ಲವೂ ಪ್ರಾಣದ

ಮೇಲೆಯೇ ಅವಲಂಬಿತವಾಗಿವೆ. ಆದ್ದರಿಂದಲೇ ಈ ಪ್ರಾಣವನ್ನು ಸರ್ವಾಯುಷ ಎಂದು ಕರೆಯುತ್ತಾರೆ. ಏಕೆಂದರೆ, ಪ್ರಾಣನೇ ಎಲ್ಲ ಜೀವರಾಶಿಗಳಿಗೆ ಆಯುಸ್ಸು. ಹಿಂದಿನ ಅನ್ನಮಯ ಶರೀರಕ್ಕೆ ಪ್ರಾಣಮಯ ಆತ್ಮವೇ ಶರೀರಿ — ಅನ್ನಮಯ ಕೋಶದ ಆತ್ಮವೇ ಪ್ರಾಣಮಯ ಆತ್ಮ.

ಈ ಪ್ರಾಣಮಯನಿಗೆ ಆತ್ಮನಾಗಿ ಮತ್ತೊಬ್ಬನಿದ್ದಾನೆ. ಅವನೇ ಮನೋಮಯ ಆತ್ಮ. ಪ್ರಾಣಮಯ ಆತ್ಮವನ್ನು ಈ ಮನೋಮಯ ಆತ್ಮನೇ ತುಂಬಿಕೊಂಡಿರುತ್ತಾನೆ. ಈ ಮನೋಮಯ ಆತ್ಮನಲ್ಲಿಯೇ ಎಲ್ಲ ಇಂದ್ರಿಯಗಳು, ಪ್ರಾಣವು ಕೂಡ ಸಮ್ಮಿಲಿತವಾಗಿದೆ. ಈ ಮನೋಮಯ ಆತ್ಮವೇ ಹಿಂದಿನ ಪ್ರಾಣಮಯ ಕೋಶದ ಆತ್ಮನಾಗಿದ್ದಾನೆ. ಏಕೆಂದರೆ, ಪ್ರಾಣಮಯದ ತುಂಬ ಈ ಮನೋಮಯ ಆತ್ಮವೇ ತುಂಬಿರುತ್ತಾನೆ.

ಈ ಮನೋಮಯ ಆತ್ಮನಿಗಿಂತಲೂ ಸೂಕ್ಷ್ಮವಾದ ಇನ್ನೊಂದು ಆತ್ಮವನ್ನು ಗುರುತಿಸಬಹುದು. ಅದೇ ವಿಜ್ಞಾನಮಯ ಆತ್ಮ. ಇದನ್ನೇ ಬುದ್ಧಿ ಎನ್ನುವುದು. ಮನೋಮಯ ಆತ್ಮವು ಬುದ್ಧಿ ಆತ್ಮನಿಂದಲೇ ತುಂಬಿದ್ದಾನೆ. ಈ ವಿಜ್ಞಾನಾತ್ಮನೇ ಮನೋಮಯ ಕೋಶದ ಆತ್ಮ. ಉಪನಿಷತ್ತು ಹೇಳುತ್ತದೆ : 'ಬುದ್ಧಿಪೂರ್ವಕವಾಗಿ ನಾವು ಯಾವ ಯಾವ ಕರ್ಮಗಳನ್ನು ಮಾಡುತ್ತೇವೆಯೋ, ಅವೆಲ್ಲವೂ ಈ ಬುದ್ಧ್ಯಾತ್ಮನನ್ನೇ ಅವಲಂಬಿಸಿರುತ್ತದೆ. ಉದಾಹರಣೆಗೆ, ಯಜ್ಞಯಾಗಾದಿಗಳು, ವಿವಿಧ ರೀತಿಯ ಕರ್ಮಗಳು ಮುಂತಾದವು. ಯಾರು ಈ ವಿಜ್ಞಾನವನ್ನೇ ಆತ್ಮವೆಂದು ಉಪಾಸನೆ ಮಾಡುತ್ತಾರೆಯೋ, ಅವರು ಯಾವ ಪ್ರಮಾದವನ್ನೂ ಮಾಡುವುದಿಲ್ಲ. ಎಲ್ಲ ರೀತಿಯ ಕಾಮಗಳನ್ನೂ ಪಡೆದುಕೊಳ್ಳುತ್ತಾನೆ. ಮನೋಮಯ ಆತ್ಮವೇ ಶರೀರ. ಅದಕ್ಕೆ ವಿಜ್ಞಾನಾತ್ಮವೇ ಶರೀರಿ. ಏಕೆಂದರೆ ವಿಜ್ಞಾನಾತ್ಮವೇ ಇಡೀ ಮನೋಮಯ ಆತ್ಮವನ್ನು ತುಂಬಿಕೊಂಡಿರುತ್ತದೆ.'

ಈ ವಿಜ್ಞಾನಮಯ ಆತ್ಮನಿಗಿಂತಲೂ ಸೂಕ್ಷ್ಮವಾದ ಇನ್ನೊಬ್ಬ ಆತ್ಮನಿದ್ದಾನೆ. ಅವನೇ ಆನಂದಮಯ ಆತ್ಮ. ವಿಜ್ಞಾನಮಯನು ಆನಂದಮಯನಿಂದಲೇ ತುಂಬಿಕೊಂಡಿರುತ್ತಾನೆ. ಮನುಷ್ಯನು ಅನುಭವಿಸುವ ಎಲ್ಲ ರೀತಿಯ ಪ್ರಾಪಂಚಿಕ ಸುಖಗಳೂ ಈ ಆನಂದಮಯ ಆತ್ಮನ ಶರೀರದ ವಿವಿಧ ಅಂಗಗಳೇ ಆಗಿವೆ ಎನ್ನಬಹುದು. ಹಿಂದಿನ ಮನೋಮಯ ಕೋಶಕ್ಕೆ ಈ ಆನಂದಮಯಾತ್ಮನೇ ಆತ್ಮನಾಗಿದ್ದಾನೆ. ಏಕೆಂದರೆ, ಮನೋಮಯ ಆತ್ಮನು ಆನಂದಮಯ ಆತ್ಮನಿಂದಲೇ ತುಂಬಿಹೋಗಿದ್ದಾನೆ.

### ಪ್ರಶ್ನೆ- ಅನುಪ್ರಶ್ನೆಗಳು

ಮೇಲಿನ ಉಪದೇಶಗಳನ್ನು ಕೇಳಿದ ಶಿಷ್ಯನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಅವುಗಳನ್ನು ಉಪನಿಷತ್ತು ದಾಖಲಿಸುತ್ತದೆ. ಬ್ರಹ್ಮವು ಆಕಾಶ, ವಾಯು ಮುಂತಾದವುಗಳಿಗೆ ಕಾರಣವಾಗಿದೆ ಎಂದು ಆಚಾರ್ಯರು ಹೇಳಿದ್ದಾರಲ್ಲವೇ. ಇವು ಜ್ಞಾನಿ-ಅಜ್ಞಾನಿ – ಇಬ್ಬರಿಗೂ ಸಮಾನವಾಗಿದೆಯಷ್ಟೇ. ಹೀಗಾಗಿ ಅಜ್ಞಾನಿಗೂ ಬ್ರಹ್ಮ ಪ್ರಾಪ್ತಿಯಾಗಬಹುದಲ್ಲ! ಎಂಬುದೇ ಶಿಷ್ಯನ ಪ್ರಶ್ನೆ. ಅದಕ್ಕೆ ಗುರುವನ್ನು ಶಿಷ್ಯನು ಹೀಗೆ ಕೇಳುತ್ತಾನೆ: ''ಅಜ್ಞಾನಿಯು ಈ ಲೋಕವನ್ನು ಬಿಟ್ಟುಹೊರಟುಹೋದ ಮೇಲೆ ಬ್ರಹ್ಮಲೋಕವನ್ನು ತಾನೇ ಸೇರಬೇಕು? ಅವನು ಎಲ್ಲಿಗೆ ತಾನೇ ಹೋಗುತ್ತಾನೆ? ಅದೇ ರೀತಿ, ಜ್ಞಾನಿಯಾದವನು ಯಾವ ಲೋಕವನ್ನು ಪಡೆಯುತ್ತಾನೆ? ಅವನೇನಾದರೂ ಯಾವುದಾದರೂ ಒಂದು ಲೋಕವನ್ನು ಹೋಗಿ ಸೇರುತ್ತಾನೆಯೆ?'' ಈ ಪ್ರಶ್ನೆಗಳಿಗೆ ನೇರವಾಗಿ ಗುರುವು ಉತ್ತರವನ್ನು ಹೇಳುವುದಿಲ್ಲ. ಅದಕ್ಕೆ ಬದಲಾಗಿ, ಬ್ರಹ್ಮದ ಅಸ್ತಿತ್ವವನ್ನು ಸಾಧಿಸಿ ತೋರಿಸುವುದಕ್ಕೆ ಸೃಷ್ಟಿಕಾರ್ಯವನ್ನು ವಿವರಿಸುತ್ತಾನೆ. ಇದರ ರಹಸ್ಯ ಹೀಗಿದೆ. ಈ ಸೃಷ್ಟಿಯ ಹಿಂದೆ ಒಂದು ಚೈತನ್ಯವಸ್ತು ಇರಲೇಬೇಕು. ಆ ಚೈತನ್ಯವೇ ಜಗತ್ತಿಗೆ ಕಾರಣವಾಗುತ್ತದೆ. ಈ ಚೈತನ್ಯವನ್ನೇ ಬ್ರಹ್ಮ ಎಂದು ಕರೆಯುವುದು. ಹೀಗಾಗಿ ಬ್ರಹ್ಮನ ಅಸ್ತಿತ್ವವನ್ನು ಜಗತ್ತಿನ ಸೃಷ್ಟಿಕಾರ್ಯದ ಮೂಲಕವೇ ಸಾಬೀತುಪಡಿಸಬಹುದು. ಇದು ಉಪನಿಷತ್ತಿನಲ್ಲಿ ಬರುವ ತರ್ಕಚಿಂತನೆ. ಇದರ ವಿವರಣೆ ಹೀಗಿದೆ:

'ಸೃಷ್ಟಿಗೆ ಮೊದಲು ಅವನೊಬ್ಬನೇ ಇದ್ದನು. ಅವನೇ ತಾನು ಬಹುವಾಗುವೆನು, ಹುಟ್ಟುವೆನು ಎಂಬ ಆಸೆಯನ್ನು ಬೆಳೆಸಿಕೊಂಡನು. ಹೀಗಾಗಿ ಅವನು ಜ್ಞಾನವೇ ಆಗಿರುವ ತಪಸ್ಸನ್ನು ಮಾಡಿದನು. ಆತ್ಮ ಅಥವಾ ಬ್ರಹ್ಮಕ್ಕೆ ಬೇರೆ ಯಾವ ಕಾಮನೆಗಳೂ ಇಲ್ಲ. ಹೀಗಾಗಿ ಅದು ಪಡೆದುಕೊಳ್ಳಬೇಕಾದುದು ಏನೂ ಇರುವುದಿಲ್ಲ. ಹೀಗಾಗಿ ಜ್ಞಾನವೇ ಇಲ್ಲಿ ತಪಸ್ಸು. ಯಾವುದರ ಜ್ಞಾನ? ಮುಂದೆ ಸೃಷ್ಟಿಸಬೇಕಾದ ಜಗತ್ತಿನ ಬಗೆಗಿನ ಆಲೋಚನೆಯನ್ನೇ ಇಲ್ಲಿ ಜ್ಞಾನವೆಂದು ಹೇಳಿರುವುದು. ಆ ತಪಸ್ಸಿನ ಮೂಲಕ ಅವನು ಈ ಜಗತ್ತಿನಲ್ಲಿ ಏನೇನು ಇದೆಯೋ ಎಲ್ಲವನ್ನೂ ಸೃಜಿಸಿದನು. ಹುಟ್ಟುವ ಪ್ರಾಣಿಗಳ ಕರ್ಮದ ಪ್ರಕಾರ, ದೇಶ-ಕಾಲ-ನಾಮ ಮತ್ತು ರೂಪಗಳ ಮೂಲಕ, ನಮಗೆ ಅನುಭವಕ್ಕೆ ಬರುವಂಥ ಜಗತ್ತನ್ನು ರಚಿಸಿದನು. ಪ್ರಾಣಿಗಳು ತಮ್ಮ ಬೇರೆ ಬೇರೆ ಅವಸ್ಥೆಗಳನ್ನು ಅನುಭವಿಸುತ್ತಿರುವ ಈ ಜಗತ್ತನ್ನು ಸೃಷ್ಟಿಸಿದನು.'

ತದನಂತರ ಉಪನಿಷತ್ತು ಹೇಳುತ್ತದೆ : 'ಜಗತ್ತನ್ನು ಸೃಷ್ಟಿಸಿದ ಆತ್ಮನು ಅದನ್ನು ಪ್ರವೇಶಿಸಿದನು. ಇದರ ಅರ್ಥ ಬ್ರಹ್ಮನು ಜಗತ್ತನ್ನು ಜೀವರೂಪದಿಂದ ಪ್ರವೇಶಿಸಿದನು. ಬ್ರಹ್ಮವೇ ಎಲ್ಲದಕ್ಕೂ ಕಾರಣನು. ಅವನು ಕಾರ್ಯರೂಪವಾದ ಈ ಜಗತ್ತನ್ನು ಪ್ರವೇಶಿಸಿದನು. ಇದು ಹೇಗೆ ಗೊತ್ತೆ? ಮಣ್ಣು ಮಡಕೆಯನ್ನು ಪ್ರವೇಶಿಸಿದಂತೆ. ಮಣ್ಣೇ ಮಡಕೆಯಾಗಿ ಪರಿವರ್ತನೆ ಹೊಂದುವುದಲ್ಲವೆ? ಹಾಗೆ ಆತ್ಮ ಅಥವಾ ಬ್ರಹ್ಮವಸ್ತುವೇ ಜಗತ್ತಾಗಿ ಪರಿಣಮಿಸುತ್ತದೆ. ಇಲ್ಲಿ ಪ್ರವೇಶ ಎಂಬ ಪದವೂ ಅಪಾರ್ಥವನ್ನು ಉಂಟು ಮಾಡಬಹುದು. ಪ್ರವೇಶವೆಂದರೆ ಎಲ್ಲ ಕಡೆಯೂ ಆತ್ಮನು ವ್ಯಾಪಿಸಿದ್ದಾನೆ ಎಂದರ್ಥ. ಈ ಜಗತ್ತಿನ ಒಳಗೂ, ಹೊರಗೂ ಭಗವಂತನೇ ತುಂಬಿದ್ದಾನೆ ಎಂದೇ ಇದರ ತಾತ್ಪರ್ಯ. ಈ ಜಗತ್ತೂ ಭಗವಂತನೇ, ಜಗತ್ತಿನ ಕಾರಣವೂ ಬ್ರಹ್ಮವೇ; ಜಗತ್ತಿನ ಆದ್ಯಂತವೂ

ಬ್ರಹ್ಮವೇ. ನಾವು ಯಾವುದನ್ನು ಈ ಜಗತ್ತು ಎಂದು ಕರೆಯುತ್ತೇವೆಯೋ, ಅದೆಲ್ಲವೂ ಈ ಬ್ರಹ್ಮ ವಸ್ತುವೇ.' – ಇದನ್ನು ನಮ್ಮ ಮನಸ್ಸಿನಲ್ಲಿ ಮತ್ತೆ ಮತ್ತೆ ಮೂಡಿಸಲು ಉಪನಿಷತ್ತು ಇಂತಹ ಸೂಚಕ ಭಾಷೆಯನ್ನು ಉಪಯೋಗಿಸುತ್ತದೆ.

ಈ ಜಗತ್ತನ್ನು ಪ್ರವೇಶಿಸಿರುವುದು ಮಾತ್ರವಲ್ಲ, ಅವನೇ ಈ ಎಲ್ಲವೂ ಆದನು. ಮೂರ್ತ ವಸ್ತುವೂ ಅವನೇ ಆದನು; ಅಮೂರ್ತ ವಸ್ತುವೂ ಅವನೇ ಆದನು. ಇದರರ್ಥ ಆತ್ಯಂತಿಕವಾಗಿ ಇವು ಯಾವುವೂ ಆತ್ಮವಸ್ತುವಿಗಿಂತ ಬೇರೆಯಲ್ಲ ಎಂದು. ದೇಶಕಾಲಗಳಿಂದ ಕೂಡಿ ಗೊತ್ತುಪಡಿಸಿದ ಎಲ್ಲ ವಸ್ತುಗಳೂ ಅವನೇ ಆದನು. ಹಾಗೆ ಗೊತ್ತುಪಡಿಸಲಾಗದ ವಸ್ತುಗಳೂ ಅವನೇ ಆದನು. ಪ್ರತ್ಯಕ್ಷವಾದುದು, ಪರೋಕ್ಷವಾದುದು – ಎಲ್ಲವೂ ಅವನೇ ಆದನು. ಚೈತನ್ಯ ವಸ್ತುಗಳೂ ಅವನೇ ಆದನು. ಅಚೈತನ್ಯ ವಸ್ತುಗಳು ಕೂಡ ಅವನೇ ಆದನು. ವ್ಯವಹಾರಕ್ಕೆ ಸಿಗುವ ವಸ್ತುಗಳು ಕೂಡ ಅವನೇ ಆದನು. ಇದನ್ನೇ ಉಪನಿಷತ್ತು 'ಸತ್ಯ ವಸ್ತು' ಎನ್ನುತ್ತದೆ. ವ್ಯವಹಾರಕ್ಕೆ ಸಿಲುಕದ ವಸ್ತುಗಳು ಕೂಡ ಅವನೇ ಆದನು. ಇದನ್ನು ಉಪನಿಷತ್ತು 'ಅಸತ್ಯ ವಸ್ತು' ಎಂದು ಹೆಸರಿಸುತ್ತದೆ. ಈ ಎರಡೂ ತೆರನ ವಸ್ತುಗಳ ಹಿಂದೆ ಇರುವ ಸತ್ವವೇ ಈ ಬ್ರಹ್ಮವಸ್ತು. ಬ್ರಹ್ಮವೊಂದೇ ಪರಮಾರ್ಥ ಸತ್ಯ. ಹಾಗೆಂದೇ ಉಪನಿಷತ್ತು ಬ್ರಹ್ಮವಸ್ತುವನ್ನು 'ಆತ್ಯಂತಿಕ ಸತ್ಯ' ಎಂದು ಹೇಳುತ್ತದೆ.

ಹಿಂದೆ ಬರೀ ಅಸತ್ತು ಮಾತ್ರವೇ ಇತ್ತು. ಅಂದರೆ ಜಗತ್ತು ಆಗ ಇರಲಿಲ್ಲ. ಅವ್ಯಾಕೃತ ಸ್ಥಿತಿಯಲ್ಲಿ ಇತ್ತು. ಜಗತ್ತು ನಾಮರೂಪಗಳಾಗಿ ವಿಂಗಡಣೆ ಹೊಂದಿರಲಿಲ್ಲ. ಅಂಥ ಅವ್ಯಾಕೃತ ಸ್ಥಿತಿಯಿಂದ ವ್ಯಾಕೃತವಾದ ಜಗತ್ತು ಮೂಡಿಬಂತು. ಅಂದರೆ ನಾಮರೂಪಗಳು ಮೂಡಿದವು. ಜಗತ್ತು ವಿವಿಧ ಪ್ರಕಾರದ ಜೀವಿ ವಸ್ತುಗಳಿಂದ ತುಂಬಿಕೊಂಡಿತು. ಬ್ರಹ್ಮ ತಾನೇ ತಾನಾಗಿ ಈ ಜಗತ್ತಿನ ರೂಪದಲ್ಲಿ ಕಾಣಿಸಿಕೊಂಡನು ಎಂದು ಉಪನಿಷತ್ತು ಘಂಟಾಘೋಷವಾಗಿ ಘೋಷಿಸುತ್ತದೆ. ಅದಕ್ಕೆ ಬ್ರಹ್ಮನನ್ನು 'ಸುಕೃತ' ಅಂದರೆ 'ಸ್ವಯಂ ಕರ್ತೃ' ಎಂಬ ಹೆಸರನ್ನು ಉಪನಿಷತ್ತು ನೀಡುತ್ತದೆ.

### ರಸೋ ವೈ ಸಃ

ಇಷ್ಟು ಮಾತ್ರವಲ್ಲ, ಬ್ರಹ್ಮನ ಅಸ್ತಿತ್ವವನ್ನು ಇನ್ನೊಂದು ವಿಧದಲ್ಲಿಯೂ ಸಾಧಿಸಿ ತೋರಿಸಬಹುದು. ಏಕೆಂದರೆ ಬ್ರಹ್ಮವು ರಸವೇ ಆಗಿದೆ. ಹಾಗೆಂದೇ ಉಪನಿಷತ್ತು ಹೇಳುತ್ತದೆ : **ರಸೋ ವೈ ಸಃ** — ರಸವೆಂದರೆ ನಮ್ಮ ತೃಪ್ತಿ ಮತ್ತು ಆನಂದಗಳಿಗೆ ಕಾರಣವಾದುದು ಯಾವುದೋ ಅದು. ಈ ರಸ ಅಥವಾ ಬ್ರಹ್ಮವನ್ನು ಮನುಷ್ಯನು ಪಡೆದುಕೊಂಡರೆ, ಅವನು ಅತ್ಯಂತ ಆನಂದವನ್ನು ಹೊಂದುತ್ತಾನೆ. ಹೀಗೆ ಮನುಷ್ಯನ ಆನಂದಕ್ಕೆ ಕಾರಣವೇ ಬ್ರಹ್ಮ ಎಂದು ಉಪನಿಷತ್ತು ಹೇಳುತ್ತದೆ. ಇದಕ್ಕೆಂದೇ ಹೊರಗಿನ ಯಾವ ಆನಂದದ ಸಾಧನಗಳು ಇಲ್ಲದಿದ್ದರೂ, ಆತ್ಮಜ್ಞಾನಿಗಳಾದವರು ಈ ರಸ ಅಥವಾ ಬ್ರಹ್ಮವನ್ನು ಅನುಭವ ಮಾಡಿಕೊಂಡಿರುವುದರಿಂದ, ಅಂತರಂಗದಲ್ಲಿ ಆನಂದಪೂರ್ಣರಾಗಿರುತ್ತಾರೆ.

ಹಾಗೆಯೇ ಪ್ರಾಣಿಗಳ ಎಲ್ಲ ಕ್ರಿಯೆಗಳಿಗೂ ಬ್ರಹ್ಮನೇ ಕಾರಣನಾಗಿದ್ದಾನೆ. ಜೀವಿಗಳ ಎಲ್ಲ ಪ್ರವೃತ್ತಿಗಳಿಗೂ ಒಂದು ಮೂಲ ಶಕ್ತಿ ಅಥವಾ ಚೈತನ್ಯ ಇರಲೇ ಬೇಕು. ಆ ಮೂಲ ಶಕ್ತಿ ಅಥವಾ ಮೂಲ ಚೈತನ್ಯವೇ ಬ್ರಹ್ಮ ಎಂದು ಉಪನಿಷತ್ತು ಪ್ರತಿಪಾದಿಸುತ್ತದೆ.

ಬುದ್ಧಿಗುಹೆಯಲ್ಲಿನ ಪರಮ ಆಕಾಶದಲ್ಲಿ ಚೈತನ್ಯರೂಪವಾದ ಈ ಆನಂದರೂಪಿ ಬ್ರಹ್ಮವೇ ಒಬ್ಬ ಮನುಷ್ಯ ಉಸಿರು ತೆಗೆದುಕೊಳ್ಳುವುದಕ್ಕೂ, ಉಸಿರು ಬಿಡುವುದಕ್ಕೂ ಕಾರಣ. ಜಗತ್ತಿನಲ್ಲಿ ಮನುಷ್ಯರು ಅನುಭವಿಸುವ ಎಲ್ಲ ರೀತಿಯ ಆನಂದಗಳೂ, ಈ ಆತ್ಮಾನಂದ ಅಥವಾ ಬ್ರಹ್ಮಾನಂದದ ತುಣುಕುಗಳು ಮಾತ್ರ.

ಅಜ್ಞಾನಿಗಳು ಸಂಸಾರ ಭಯದಿಂದ ನರಳುತ್ತಿರುತ್ತಾರೆ. ಆತ್ಮಜ್ಞಾನಿಗಳು ಅಭಯ ಸ್ಥಿತಿಯನ್ನು ಹೊಂದಿರುತ್ತಾರೆ. ಈ ಭಯ–ಅಭಯಗಳಿಗೆ ಕಾರಣ ಯಾವುದು? ಅದೂ ಬ್ರಹ್ಮ ಎಂದು ಉಪನಿಷತ್ತು ಹೇಳುತ್ತದೆ. ಬ್ರಹ್ಮವೇ ಅಭಯ. ಬ್ರಹ್ಮ ಸ್ಥಿತಿಯೇ ಅಭಯ ಸ್ಥಿತಿ. ಏಕೆಂದರೆ ಈ ಸ್ಥಿತಿಯು ಸಾಧಾರಣ ದೃಶ್ಯರೂಪದ್ದಲ್ಲ ; ದೃಕ್‌ರೂಪದ್ದು; ಆತ್ಮರೂಪದ್ದು. ಆದ್ದರಿಂದ ಯಾವ ವಿಕಾರವೂ ಇದರಲ್ಲಿ ಇಲ್ಲ. ಜಗತ್ತಿನಲ್ಲಿ ಇರುವ ಎಲ್ಲದಕ್ಕೂ ಆಶ್ರಯವೊಂದು ಇದ್ದೇ ಇರುತ್ತದೆ. ಎಲ್ಲದಕ್ಕೂ ಆಶ್ರಯವಾಗಿ ಇದ್ದುಕೊಂಡು, ತನಗೆ ಬೇರೆ ಯಾವುದೂ ಆಶ್ರಯವಿಲ್ಲದ್ದು ಒಂದೇ. ಅದೇ ಬ್ರಹ್ಮ ಎಂದು ಉಪನಿಷತ್ತು ವರ್ಣಿಸುತ್ತದೆ.

ಅನಂತರ ಅಜ್ಞಾನಿಗೆ ಭಯ ಉಂಟಾಗುವುದರ ಕಾರಣ ಏನು ಎನ್ನುವುದನ್ನು ಉಪನಿಷತ್ತು ವಿಶ್ಲೇಷಿಸುತ್ತದೆ. ಯಾವನು ಇನ್ನೊಬ್ಬನ ಜೊತೆಗೆ ಸ್ವಲ್ಪವಾದರೂ ಅಂತರವಿದೆ ಎಂದು ಭಾವಿಸುತ್ತಾನೆಯೋ, ಅವನಿಗೆ ಭಯದ ಭಾವನೆ ಕಾಡುತ್ತದೆ. ಅವನನ್ನೇ ಅಜ್ಞಾನಿ ಎಂದು ಕರೆಯುವುದು. ಸಂಕ್ಷಿಪ್ತವಾಗಿ, ಭೇದಬುದ್ಧಿಯೇ ಅಜ್ಞಾನ; ಅದೇ ಭಯಕ್ಕೆ ಕಾರಣ. ಅಭೇದ ಬುದ್ಧಿಯೇ, ಬ್ರಹ್ಮಬುದ್ಧಿಯೇ ಜ್ಞಾನ; ಅದೇ ಅಭಯಕ್ಕೆ ಕಾರಣ. ಈಶ್ವರನು ಬೇರೆ, ಸಂಸಾರಿಯಾದ ನಾನು ಬೇರೆ ಎನ್ನುವುದೇ ಅಜ್ಞಾನಿಗಳ ದೃಷ್ಟಿ. ಇದೇ ಭಯಕ್ಕೆ ಕಾರಣ. ಈಶ್ವರನ ರೂಪವನ್ನು ತಾಳಿರುವ ಬ್ರಹ್ಮತತ್ತ್ವವೂ, ನನ್ನ ಆತ್ಮವೂ ಬೇರೆಯಲ್ಲ ಎಂದು ಯಾರು ಅಭೇದ ದೃಷ್ಟಿಯನ್ನು ತಾಳುವರೋ ಅವರೇ ಜ್ಞಾನಿಗಳು. ಅವರಲ್ಲಿ ಅಭಯವು ಮನೆಮಾಡಿಕೊಂಡಿರುತ್ತದೆ. ಹೀಗೆ ಭಯಕಾರಣವೂ ಬ್ರಹ್ಮ ಎಂದು ಉಪನಿಷತ್ತು ಪ್ರತಿಪಾದಿಸುತ್ತದೆ. ಹಾಗೆಯೇ ಪ್ರಸಿದ್ಧವಾಗಿರುವ ಒಂದು ಘೋಷಣೆಯನ್ನು ಮಾಡುತ್ತದೆ: 'ಈತನ ಭಯದಿಂದಲೇ ವಾಯುವು ಬೀಸುತ್ತಾನೆ; ಭಯದಿಂದಲೇ ಸೂರ್ಯನು ಉದಯಿಸುತ್ತಾನೆ; ಈತನ ಭಯದಿಂದಲೇ ಅಗ್ನಿಯೂ ಇಂದ್ರನೂ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಐದನೆಯವನಾದ ಮೃತ್ಯುವೂ ಈತನ ಭಯದಿಂದಲೇ ಓಡಿಹೋಗುತ್ತಾನೆ.'

## ಆನಂದದ ಮೀಮಾಂಸೆ

ಬ್ರಹ್ಮನ ಅಸ್ತಿತ್ವಕ್ಕೆ ಹಿಂದೆ ನೀಡಿದ ಕಾರಣಗಳನ್ನು ನೀಡುವ ಗುರುಗಳು ಈಗ ಆನಂದರೂಪನಾದ ಬ್ರಹ್ಮನ ಬಗ್ಗೆ ವಿಶ್ಲೇಷಣೆಯನ್ನು ಮಾಡುತ್ತಾರೆ. ಅದನ್ನೇ 'ಆನಂದದ ಮೀಮಾಂಸೆ' ಎಂದು ಕರೆದಿದ್ದಾರೆ. ಲೌಕಿಕ ಆನಂದವು ಯಾವುದೋ ಒಂದು ಸಾಧನದಿಂದ ಉಂಟಾಗುವ ಸಾಧ್ಯ ಅನುಭವ. ಅದಕ್ಕೆ ಆದಿ, ಅಂತ್ಯಗಳು ಇರುವುದನ್ನು ಕಾಣುತ್ತೇವೆ. ಈ ಆನಂದದಲ್ಲಿ ಉತ್ಕೃಷ್ಟವಾದುದು ಯಾವುದು ಎಂದು ತಿಳಿದುಕೊಳ್ಳುವುದೇ ಆನಂದ ಮೀಮಾಂಸೆಯಲ್ಲಿ ವಿಚಾರ ಮಾಡಿರುವ ಅಂಶ. ಲೌಕಿಕ ಆನಂದದ ಉತ್ಕೃಷ್ಟತೆಯಲ್ಲಿಯೂ ಯಾರು ವೈರಾಗ್ಯವನ್ನು ತಾಳುತ್ತಾನೆಯೋ, ಅದರಿಂದ ವಿಮುಖನಾಗುತ್ತಾನೋ ಅವನು ಮಾತ್ರವೇ ಬ್ರಹ್ಮಾನಂದಕ್ಕೆ ಯೋಗ್ಯನಾಗುತ್ತಾನೆ ಎನ್ನುವುದೇ ಉಪನಿಷತ್ತಿನ ತಾತ್ಪರ್ಯ. ಇಲ್ಲಿ ಒಂದು ಗಮನಿಸಬೇಕಾದ ಅಂಶವೆಂದರೆ, ಲೌಕಿಕವಾದ ಆನಂದವು ಕೂಡ ಬ್ರಹ್ಮಾನಂದದ ಒಂದು ಅಂಶವೇ ಆಗಿದೆ ಎನ್ನುವುದು. ಅವಿದ್ಯೆಯ ಆವರಣ ಹೆಚ್ಚಾದಂತೆ, ಜೀವಿಗಳಲ್ಲಿ ಆನಂದದ ಆವರಣವು ಹೆಚ್ಚುತ್ತ ಹೋಗುತ್ತದೆ. ದುಃಖ ಆವರಿಸಿಕೊಳ್ಳುತ್ತದೆ. ಇಲ್ಲೂ ಮಧ್ಯೆ ಮಧ್ಯೆ ಸಂತೋಷದ ಹೊನಲುಗಳು ಕಾಣಬಹುದು. ಅವು ನಿಜವಾದ ಆನಂದವಾದ ಬ್ರಹ್ಮಾನಂದದ ಝುಳಕುಗಳಲ್ಲದೆ ಬೇರೆಯಲ್ಲ. ಇದನ್ನು ಗುರುಗಳು ಕಾವ್ಯಮಯವಾಗಿ, ಸೊಗಸಾಗಿ ಹೀಗೆ ಹೇಳುತ್ತಾರೆ:

''ಒಬ್ಬ ಯುವಕನನ್ನೇ ತೆಗೆದುಕೊಳ್ಳೋಣ. ಒಳ್ಳೆಯ ಅಧ್ಯಯನ ಮಾಡಿದ್ದು, ಜೀವನದಲ್ಲಿ ಬಹಳವಾದ ಆಸೆಯನ್ನು ಅವನು ಹೊಂದಿರುತ್ತಾನೆ. ಅದಲ್ಲದೆ, ದೈಹಿಕವಾಗಿಯೂ ಅವನು ಬಲಿಷ್ಠನಾಗಿರುತ್ತಾನೆ. ಅಂಥವನು ಇಡೀ ಭೂಮಿಯಲ್ಲಿರುವ ಎಲ್ಲ ಸಂಪತ್ತಿನ ಒಡೆತನವನ್ನು ಪಡೆದರೆ, ಇನ್ನೇನು ಹೇಳುವುದು?! ಅವನಿಗಿರುವ ಆನಂದವಿದೆಯಲ್ಲ, ಇದನ್ನೇ ಎಲ್ಲ ಮನುಷ್ಯರಿಗೂ ಇರುವ ಆನಂದಕ್ಕಿಂತ ಅತ್ಯಂತ ಉತ್ತಮವಾದ ಆನಂದವೆಂದು ಪರಿಗಣಿಸಿಕೊಳ್ಳೋಣ. ಇಂಥ ಉತ್ಕೃಷ್ಟ ಆನಂದಗಳ ನೂರು ಮಡಿಯಷ್ಟು ಇರುವುದು ಯಾವುದು ಗೊತ್ತೆ? ಮನುಷ್ಯ ಗಂಧರ್ವರು ಎಂದು ಕರೆಯಲ್ಪಡುವ ಉನ್ನತ ಲೋಕದ ಜೀವಿಗಳ ಆನಂದ. ಈ ಜೀವಿಯ ದೇಹವು ಮನುಷ್ಯನ ದೇಹಕ್ಕಿಂತ ಸೂಕ್ಷ್ಮವಾದುದು. ಅಲ್ಲದೆ, ಅವನು ಅನೇಕ ಶಕ್ತಿಗಳನ್ನು ಹೊಂದಿರುತ್ತಾನೆ. ಹೀಗಾಗಿ ಆನಂದವನ್ನು ಅನುಭವಿಸುವುದಕ್ಕೆ ಅವನಿಗೆ ಇರುವ ಅಡಚಣೆಗಳು ಬಹಳ ಕಡಮೆಯಾಗಿರುತ್ತವೆ. ಹೀಗಾಗಿ ಆತನ ಮನಸ್ಸೂ ಕೂಡ ಪ್ರತೀಕಾರ ರಹಿತವಾಗಿ, ತಿಳಿಯಾಗಿದ್ದು, ಸಮಾಧಾನದಿಂದ ಇರುತ್ತದೆ. ಹೀಗೆ ಮನಸ್ಸು ಶಾಂತಿಯಿಂದ ಇರುವುದರಿಂದ, ಉನ್ನತ ಲೋಕಗಳಲ್ಲಿ ಜೀವಿಗಳ ಆನಂದವು ನೂರು ನೂರು ಮಡಿ ಹೆಚ್ಚಾಗುತ್ತ ಹೋಗುತ್ತದೆ. ಮನುಷ್ಯ ಗಂಧರ್ವನ ಈ ಆನಂದವು ಶಾಸ್ತ್ರಗಳಲ್ಲಿ ಮೇಧಾವಿಯೂ, ಕಾಮರಹಿತನೂ ಆದ ಮುಮುಕ್ಷುವಿನ ಆನಂದಕ್ಕೆ ಸಮನಾಗಿದೆ. ಹೀಗೆಯೇ ಮುಂದುಮುಂದಿನ ಉನ್ನತ ಲೋಕಗಳ ಭೋಗವನ್ನು ಅವನು ತ್ಯಜಿಸುತ್ತ ಹೋದರೆ, ಅವನಲ್ಲಿ ಸ್ಫುರಿಸುವ ಆನಂದವೂ ಹೆಚ್ಚಾಗುತ್ತಲೇ ಹೋಗುತ್ತದೆ. ಕಟ್ಟಕಡೆಗೆ ಅದು ಬ್ರಹ್ಮಾನಂದವಾಗುತ್ತದೆ. ಹೀಗೆಯೇ ನಾವು ಉನ್ನತ ಲೋಕಗಳನ್ನು ವಿಚಾರ ಮಾಡುತ್ತ ಹೋದರೆ, ನಮಗೆ ತಿಳಿದುಬರುತ್ತದೆ: ಲೌಕಿಕ ಆನಂದಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದುದು ಪ್ರಜಾಪತಿಯ ಆನಂದ. ಬ್ರಹ್ಮಾನಂದವು ಅದಕ್ಕೂ ನೂರು ಪಟ್ಟು ಮಿಗಿಲಾದದ್ದು ಎಂದು.''

ಈ ಬ್ರಹ್ಮಾನಂದಕ್ಕೆ ಸಾಧನ ಅದಾವುದು? ಇದನ್ನು ಗುರುಗಳು ಸಂಕ್ಷಿಪ್ತವಾಗಿ ಹೀಗೆ ಹೇಳಿಕೊಡುತ್ತಾರೆ: ''ಒಬ್ಬನೇ ಪುರುಷನು (ಬ್ರಹ್ಮನು) ತನ್ನಲ್ಲಿಯೂ ಇರುವವನು, ಆದಿತ್ಯನಲ್ಲಿಯೂ ಇರುವವನು — ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ಇರುವವನು ಎನ್ನುವುದನ್ನು ಕಂಡುಕೊಳ್ಳುವುದೇ ಬ್ರಹ್ಮಾನಂದಕ್ಕೆ ಸಾಧನ'' ಎಂದು.

ಈ ಬ್ರಹ್ಮಜ್ಞಾನದ ಫಲ ಏನು? ಗುರುಗಳು ಹೇಳುತ್ತಾರೆ: ''ಬ್ರಹ್ಮವಿದ್ಯೆಯನ್ನು ತಿಳಿದವನು ಈ ಲೋಕದಿಂದ ಹೊರಟು ಹೋಗುವಾಗ, ಎಲ್ಲ ಕೆಳ ಸ್ತರದ ಆತ್ಮಗಳನ್ನು ದಾಟಿಹೋಗುತ್ತಾನೆ. ಅನ್ನಮಯ ಆತ್ಮ, ಪ್ರಾಣಮಯ ಆತ್ಮ, ಮನೋಮಯ ಆತ್ಮ, ವಿಜ್ಞಾನಮಯ ಆತ್ಮ. ಆನಂದಮಯ ಆತ್ಮ – ಇವುಗಳಲ್ಲಿ ತಾದಾತ್ಮ್ಯವನ್ನು ಪಡೆದುಕೊಂಡು, ಅವುಗಳನ್ನು ಮೀರಿಹೋಗುತ್ತಾನೆ. ತನ್ನ ಆತ್ಮದ ಬಗೆಗಿನ ಅರಿವನ್ನು ವಿಕಾಸಗೊಳಿಸಿಕೊಳ್ಳುತ್ತ ಹೋಗುತ್ತಾನೆ. ಎಲ್ಲಿ ಮನಸ್ಸು, ಮಾತುಗಳು ಕೂಡ ವಿಚಾರಿಸಲು ಹೋಗಿ, ಹಿಂತಿರುಗಿ ಬರುತ್ತವೆಯೋ, ಅಂಥ ಆನಂದರೂಪವಾದ ಬ್ರಹ್ಮವನ್ನು ತನ್ನ ಆತ್ಮವೆಂದೇ ತಿಳಿದುಕೊಂಡು, ಮತ್ತೆಂದಿಗೂ ಅವನು ಭಯವನ್ನು ಪಡೆಯುವುದೇ ಇಲ್ಲ. ಇದೇ ನಿರ್ವಿಕಲ್ಪ ಜ್ಞಾನ; ಇದೇ ಆತ್ಮಜ್ಞಾನ; ಇದೇ ಮಾನವ ಬದುಕಿನ ಅತ್ಯಂತ ಉತ್ಕಟ ಸ್ಥಿತಿ.'' ಅಂಥ ಭವ್ಯ ಸ್ಥಿತಿಯ ಸುಂದರ ಚಿತ್ರಣವನ್ನು ಉಪನಿಷತ್ತು ಹೀಗೆ ನೀಡುತ್ತದೆ:

''ಈ ಸ್ಥಿತಿಯಲ್ಲಿ ನಾನು ಒಳ್ಳೆಯದನ್ನು ಏಕೆ ಮಾಡಲಿಲ್ಲ? ನಾನು ಪಾಪವನ್ನೇಕೆ ಮಾಡಿದೆ? – ಈ ರೀತಿಯ ಪುಣ್ಯಪಾಪಗಳ ಯೋಚನೆಯು ವಿದ್ವಾಂಸನನ್ನು ಸುಡುವುದೇ ಇಲ್ಲ. ಪಾಪಪುಣ್ಯಗಳೆರಡನ್ನೂ ಮೀರಿಹೋಗಿರುತ್ತಾನೆ, ಅವನು. ಎಲ್ಲವನ್ನೂ ತನ್ನಾತ್ಮವನ್ನಾಗಿಯೇ ಮಾಡಿಕೊಂಡಿರುತ್ತಾನೆ, ಅವನು. ಎಲ್ಲವೂ ಅವನಿಗೆ ಆತ್ಮರೂಪವಾಗಿಯೇ ಗೋಚರಿಸುತ್ತದೆ. ಇದೇ ಉಪನಿಷತ್ತು, ಇದೇ ರಹಸ್ಯವಿದ್ಯೆ.''

ಇಲ್ಲಿಗೆ ಗುರುಗಳು ತಮ್ಮ ಉಪದೇಶವನ್ನು ಸಮಾಪ್ತಗೊಳಿಸುತ್ತಾರೆ. ಶಿಷ್ಯನನ್ನು ಲೌಕಿಕ ಆನಂದದ ತಾರತಮ್ಯದಿಂದ, ನಿರಪೇಕ್ಷ ನಿತ್ಯ ಆನಂದದ ಕಡೆಗೆ ಕರೆದುಕೊಂಡು ಹೋಗುತ್ತಾರೆ. ಇದೇ ಬ್ರಹ್ಮಾನಂದವೆಂದು ಗೊತ್ತುಮಾಡಿ ತೋರಿಸುತ್ತಾರೆ.